# ಅಧ್ಯಾಯ-೮ : ಮುಕ್ತಾಯಕ್ಕೆ ಮುನ್ನ

# ಅಧ್ಯಾಯ - ೮

## ಮುಕ್ತಾಯಕ್ಕೆ ಮುನ್ನ

ಹೊಸಗನ್ನಡ ಸಾಹಿತ್ಯದ ಮಹತ್ವದ ಕವಿಯಾದ ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಪರಿಕಲ್ಪನೆಯನ್ನು ಅಧ್ಯಯನ ಮಾಡುವುದು, ವಿಶ್ಲೇಷಣೆ ಮಾಡುವುದು, ಅವರ ಕಾವ್ಯದ ಬಗೆಗಿನ ಒಂದು ಪ್ರಮುಖವಾದ ಅಧ್ಯಯನವಾಗಿದೆ. 'ಶತಮಾನದ ಬಹುಮುಖ್ಯ ಜನಕ ಕವಿ' ಎಂದು ಅಡಿಗರಿಂದ ಕರೆಸಿಕೊಂಡ ಬೇಂದ್ರೆಯವರ ಕಾವ್ಯ ಸಾರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿದೆ. ಇದಕ್ಕೆ ಪೂರಕವಾಗಿ ಬೇಂದ್ರೆಯವರ ಮಾತುಗಳನ್ನೇ ನಾವು ಗಮನಿಸಬಹುದಾಗಿದೆ. "ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ಒಂದು ಸಜೀವ ವಿಕಾಸ ಪ್ರಕ್ರಿಯೆ. ಅದಕ್ಕೆ ಶತಶತಮಾನಗಳೂ ಬೇಕಾಗಬಹುದು. ನನ್ನನ್ನು ಪೂರ್ತಿ ಅರ್ಥಮಾಡಿಕೊಳ್ಳುವುದು ಭವಿಷ್ಯತ್ತಿನಲ್ಲಿದೆ" ಎಂದು ತಮ್ಮ ಕಾವ್ಯದ ಶ್ರೇಷ್ಟತೆಯ ಬಗ್ಗೆ ಬೇಂದ್ರೆ ಹೇಳಿಕೊಳ್ಳುತ್ತಾರೆ. ಅವರ ಕಾವ್ಯವನ್ನು ಹೆಚ್ಚು ಹೆಚ್ಚು ಅಧ್ಯಯನ ಮಾಡಿದಂತಲ್ಲ ಅವರ ಪ್ರತಿಭೆಯ ಆಳ ವಿಸ್ತೀರ್ಣ ಅರ್ಥಗೂಢತೆಗಳ ಅರಿವಾಗುತ್ತದೆ. ಬದುಕಿನ ಅನುಭವ ಮತ್ತು ದರ್ಶನಗಳೆಲ್ಲವನ್ನು ಒಂದು ಉನ್ನತವಾದ ಸ್ವೋಪಜ್ಞವಾದ ಕಾವ್ಯ ಸಂಸ್ಕಾರದೊಂದಿಗೆ ಕಾವ್ಯಭಿವ್ಯಕ್ತಿಸಿರುವುದು ಬೇಂದ್ರೆಯವರ ಕಾವ್ಯದ ಶ್ರೇಷ್ಠತೆಗೆ ಕಾರಣವಾಗಿದೆ. ಹಾಗಾಗಿಯೇ ಬೇಂದ್ರೆಯವರ ಕಾವ್ಯವು ಎಲ್ಲ ಕಾಲದಲ್ಲೂ ಭಿನ್ನ ಬಿನ್ನ ಆಯಾಮಗಳೊಂದಿಗೆ ಅಧ್ಯಯನಕ್ಕೆ ಒಳಗಾಗುತ್ತಲೇ ಇರುವುದನ್ನು ನಾವು ಕಾಣಬಹುದಾಗಿದೆ.

ಬದುಕಿನ ವೈಯಕ್ತಿಕ ನೆಲೆಯು ಯಾವತ್ತೂ ನಮ್ಮ ಪ್ರಧಾನವಾದ ಪ್ರಜ್ಞೆಯ ಎಳೆಯನ್ನು ರೂಪಿಸಿರುತ್ತದೆ. ಬೇಂದ್ರೆಯವರ ಈ ಪ್ರಧಾನವಾದ ಪ್ರಜ್ಞೆಯ ಎಳೆ 'ಮಾತೃತ್ವ' ಇದನ್ನು ರೂಪಿಸಿದ್ದು ಅವರ ಕೌಟುಂಬಿಕ ಪರಿಸರ, ಮನೆತನದ ಪರಂಪರೆಯ ಸಂಸ್ಕಾರ ಮತ್ತು ಪ್ರಧಾನವಾಗಿ ತಾಯಿ ಅಂಬಿಕೆಯ ಅಪಾರವಾದ ಮಾತೃವಾತ್ಸಲ್ಯ. ಬೇಂದ್ರೆಯವರ ಬಾಲ್ಯ ವಾತ್ಸಲ್ಯರಸದ ಕೋಟೆಯೊಳಗೆ ವಿಹರಿಸಿತ್ತು. ಅವರ ತಾಯಿ ಅವರಲ್ಲಿ ರೂಪಿಸಿದ ಪೌರುಷವೇ 'ಮಾತೃತ್ವ'. ಇದೇ ಮುಂದೆ ಅವರ ಕಾವ್ಯದ ಮೂಲ ಸೆಲೆಯಾಯಿತು. ಕವಿಮಾತೆಯಾಗಿ ಬೇಂದ್ರೆಯವರಿಗೆ ಮತ್ತು ಅವರ ಕಾವ್ಯಕ್ಕೆ ಬೇಂದ್ರೆಯವರ ತಾಯಿ ಅಂಬಿಕೆ ನಿರಂತರ ಸ್ಫೂರ್ತಿಯ ಸೆಲೆಯಾದರು. ಈ ಎಲ್ಲಾ ಅಂಶಗಳು 'ಕವಿ ಬೇಂದ್ರೆಯನ್ನು ಸೃಜಿಸಿದ ಬಗೆ'ಯನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಿದ್ದೇನೆ.

ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಸಂಸ್ಕೃತಿಯನ್ನು ಅರಗಿಸಿಕೊಂಡು, ಮೈಗೂಡಿಸಿಕೊಂಡು ಜನರ ಆಡುಮಾತಿನಲ್ಲಿ ಅತ್ಯುತ್ತಮ ಕವಿತೆಗಳನ್ನು ಬರೆದ ಪ್ರತಿಭಾವಂತ ಕವಿ ಬೇಂದ್ರೆ ಒಬ್ಬರೇ. ಜಾನಪದ

ದೇಸೀ ಪರಂಪರೆ ಮತ್ತು ಭಾರತೀಯ ಪರಂಪರೆಯನ್ನು ಯಾವ ಎಗ್ಗೂ ಇಲ್ಲದೆ ಬಳಸಿಕೊಂಡರು. ಕನ್ನಡ ಜನಪದ ಸಾಹಿತ್ಯದಲ್ಲಿ ಮತ್ತು ಭಾರತೀಯ ಸಂಸ್ಕೃತಿಯಲ್ಲಿ 'ತಾಯಿತತ್ತ್ವ'ವು ಒಂದು ಪ್ರತಿಮೆಯಾಗಿ ಬಳಕೆಯಾಗುತ್ತದೆ. ಅಂದೊಂದು ಸಂಸ್ಕೃತಿಯ ಮೌಲ್ಯವಾಗಿ ಗುರುತಿಸಲ್ಪಟ್ಟಿದೆ. ಮಾತೃಪ್ರಧಾನ ಚಿಂತನೆಯುಳ್ಳ ಸಮಾಜದ ಮೂಲ ಪ್ರೇರಣೆ ಪ್ರೇಮವಾಗಿದ್ದು, ಅದರ ಮುಂದುವರೆದ ಫಲವತ್ತತೆಯ ಸ್ಥಿತಿಯು ಮಾತೃತ್ವ ಆಗಿದೆ. ಮಾತೃತ್ವ ಪ್ರಜ್ಞೆಯು ಮನುಷ್ಯನ ಸಂಸ್ಕಾರ ರೂಪವೇ ಆಗಿದೆ. ಆದುದರಿಂದಲೇ ಮನುಷ್ಯನ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ವಿವೇಚಿಸುವಾಗ ಮಾತೃಪ್ರಧಾನ ಮೌಲ್ಯಗಳನ್ನೇ ಒರೆಗಲ್ಲಾಗಿ ಇಟ್ಟು ನೋಡುತ್ತಾರೆ. ಹೀಗೆ ಭಾರತೀಯ ಸಂಸ್ಕೃತಿಯ ವೈದಿಕ, ವೈದಿಕೇತರ ನೆಲೆಗಳಲ್ಲಿ ಮತ್ತು ಜನಪದರ ಬದುಕಿನ ಬಿಂಬದಲ್ಲಿ ಪ್ರಧಾನವಾಗಿ ಗುರುತಿಸಲ್ಪಡುವ ಮಾತೃತ್ವವು ಬೇಂದ್ರೆಯವರ ಮಾತೃತ್ವ ಪರಿಕಲ್ಪನೆಯ ವಿಕಾಸಕ್ಕೆ ಸ್ಫೂರ್ತಿಯಾಯಿತು. ಇವುಗಳು ಬೇಂದ್ರೆಯವರ ಕಾವ್ಯದಲ್ಲಿನ ಮಾತೃತ್ವದ ಕಲ್ಪನೆಯ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದೆ. ಇದು ಮಹಾ ಪ್ರಬಂಧದ ಅಧ್ಯಯಕ್ಕೆ ಪೂರಕವಾದ ಅಧ್ಯಯನವಾಗಿದೆ.

ಮಾತೃಶಕ್ತಿಯಲ್ಲಿ ಬೇಂದ್ರೆಯವರಿಗೆ ಅಪಾರವಾದ ನಂಬಿಕೆ. ಹೆಣ್ಣು ಬೇಂದ್ರೆಯವರ ಪಾಲಿಗೆ ಜೀವದಾಯಿನಿ, ಸೌಂದರ್ಯದ ಖನಿ, ಮೌಲ್ಯಗಳ ಚಿರಂತನ ಪ್ರತೀಕ, ಉದ್ಧರಿಸುವ ಶಕ್ತಿ. ಬೇಂದ್ರೆಯವರ ಈ ಹೆಣ್ಣು ತಾಯಿಯಲ್ಲದೆ ಬೇರೆಯಲ್ಲ. ಆದುದರಿಂದಲೇ ಬೇಂದ್ರೆಯವರು ಬದುಕಿನ ಚಿರಂತನ ಮೌಲ್ಯಗಳನ್ನು ತಾಯಿಗೆ ಹೋಲಿಸುತ್ತಾರೆ. ಆ ಚಿರಂತನ ಮೌಲ್ಯಗಳು ಕನ್ನಡ ನಾಡುನುಡಿಯ ಪ್ರೀತಿ ಅಭಿಮಾನವಿರಬಹುದು, ರಾಷ್ಟ್ರೀಯತೆಯ ಪ್ರಜ್ಞೆ ಇರಬಹುದು, ಭೂಮಿತಾಯಿಯ ಚಿರಂತನವಾದ ಚೈತನ್ಯವಿರಬಹುದು. ಇವು ಬೇಂದ್ರೆಯವರ ಕಾವ್ಯದಲ್ಲಿ ಮಾತೃತ್ವದ ಮಹಾ ವಾತ್ಸಲ್ಯದ ಪ್ರತೀಕಗಳಾಗುತ್ತವೆ. ಇವುಗಳ ಜೊತೆಗಿನ ಮನುಷ್ಯರ ಸಂಬಂಧ ತಾಯಿ ಮಕ್ಕಳ ಸಂಬಂಧವಾಗುತ್ತದೆ. ಈ ಬಾಂಧವ್ಯದ ಪರಿಪೋಷಣೆಗೆ ಅವರ ವೈಯಕ್ತಿಕ ನೆಲೆಯ ಮಾತೃಪ್ರಜ್ಞೆ ಮತ್ತು ಆಧ್ಯಾತ್ಮಿಕ ನೆಲೆಯ ಸಂಸ್ಕಾರಗಳು ಜೊತೆಯಾಗುತ್ತವೆ. ಮಾತೃತ್ವದ ಅರಿವು ಅನುಭವದ ನೆಲೆಯಿಂದ ಅನುಭಾವದ ನೆಲೆಗೇರುತ್ತದೆ. ಬೇಂದ್ರೆಯವರು ಭೂಮಿತಾಯಿಯ ಬಗೆಗೆ ಹೊಂದುವ ಭಾವಗ್ರಹಿಕೆಯು ಅನನ್ಯವಾದುದಾಗಿದೆ. 'ಇಳೆ ಎಂದರೆ ಬರಿ ಮಣ್ಣಲ್ಲ ನಮಗೋ ನೋಡುವ ಕಣ್ಣಿಲ್ಲ' ಎಂದು ಭಾವಿಸುವ ಬೇಂದ್ರೆಯವರಿಗೆ ಭೂಮಿ ಕೇವಲ ಭೌತಿಕ ವಸ್ತುವಲ್ಲ. ತನ್ನನ್ನು ವಸ್ತುವೆಂದು ಭಾವಿಸುವವರಿದ, ಆಕೆ 'ಒಡವ್ಯಲ್ಲೋ ಮಗನೆ ಉಸಿರಿದ್ದೂಡಲು' ಎಂದು ಕೂಗಿ ಹೇಳುತ್ತಾಳೆ. ಬೇಂದ್ರೆಯವರಲ್ಲಿ ಭೂಮಿತಾಯಿ ಮೈತುಂಬಾ ಬಾಯಿರುವ, ತುಟಿಮುದ್ದಿನ ವಾತ್ಸಲ್ಯದ ರೂಪವೂ ಹೌದು, ಕೆನ್ನೀರ ಜಳಕವನ್ನು ಬಯಸುವ ರೌದ್ರಿಯೂ ಹೌದು. ಬೇಂದ್ರೆಯವರ ಕಾವ್ಯದಲ್ಲಿ ಭೂಮಿತಾಯಿ ಒಂದು ಅನನ್ಯ ಸೃಷ್ಟಿಯಾಗಿದ್ದಾಳೆ.

ಹಾಗಾಗಿಯೇ ಬೇಂದ್ರೆ 'ಭೂಮಿ ಕವಿ' ಎಂದೂ ಕರೆಸಿಕೊಂಡಿದ್ದಾರೆ. ಬೇಂದ್ರೆಯವರ 'ಭೂಮಿತತ್ತ್ವ' 'ತಾಯಿತತ್ತ್ವ'ದ ಒಂದು ಮುಖವಾಗಿದೆ.

'ಐದು ಐದೆಯರ ಮಗ'ನಾದ ಬೇಂದ್ರೆಯವರ 'ಸಪ್ತ ನಮಸ್ಕಾರಗಳು' ಸಪ್ತ ತಾಯಂದಿರಿಗೆ ಸಲ್ಲುತ್ತದೆ. ಇದಲ್ಲದೆ ಜಾನಪದದ ತಾಯಂದಿರುಗಳೂ ಬೇಂದ್ರೆಯವರಿಗೆ ಆರಾಧ್ಯರೇ. ಬೇಂದ್ರೆಯವರ ಮಾತೃತತ್ತ್ವ ಪ್ರಾದೇಶಿಕ ಸತ್ವದಿಂದ ವಿಶ್ವಾತ್ಮಕ ತಿಳಿವಿನವರೆವಿಗೂ ಮುಂದುವರೆಯುತ್ತದೆ. ಅವರ ಮಾತೃತ್ವದ ವಿರಾಟದರ್ಶನ ವಿಶ್ವಮಾತೆಯ ದರ್ಶನವಾಗುತ್ತದೆ. ಬೇಂದ್ರೆಯವರ ಮಾತೃ ಭಕ್ತಿಯ ಔನ್ನತ್ಯ ವಿಶ್ವಮಾತೆಯು ಸಾತತ್ಯವಾಗಿದೆ. ತಮ್ಮೊಳಗೇ ದ್ವಂದ್ವ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವ ಬೇಂದ್ರೆಯವರಿಗೆ ಬೇಂದ್ರೆ ಬೇರೆ, ಅಂಬಿಕಾತನಯದತ್ತ ಬೇರೆಯಾಗುತ್ತಾರೆ. ಇದರ ವ್ಯಕ್ತ ರೂಪಗಳು ಹಲವಾರು. ಒಬ್ಬ ಕವಿಯಲ್ಲಿ ದ್ವಂದ್ವ ವ್ಯಕ್ತಿತ್ವವಿರುವುದು ಕಾವ್ಯ ಮೀಮಾಸೆಯ ದೃಷ್ಟಿಯಲ್ಲಿ ಅರ್ಥಪೂರ್ಣ. ಆದರೆ ಬೇಂದ್ರೆಯವರ ಕಾವ್ಯನಾಮದ ಹಿನ್ನೆಲೆಯಲ್ಲಿ ಮಾತೃದೃಷ್ಟಿಯು ಕೆಲಸ ಮಾಡುತ್ತದೆ. ಕಾವ್ಯ ವಿದ್ಯೆಯು ಯಕ್ಷಿಣಿ ರೂಪದ ತಮ್ಮ ತಾಯಿಯಿಂದಲೇ ಸಿದ್ಧಿಸಿದ್ದು. ಕಾವ್ಯ ಸೃಷ್ಟಿಯ ಮೂಲ ಸ್ಫೂರ್ತಿ ತಾಯಿ ಅಂಬಿಕೆಯೇ ಆಗಿದ್ದಾಳೆ.

"ದೇಹವೊಂದು ದೇವವೀಣೆ
ತಾಯಿ ನಿನ್ನ ಕೈಗೆ ನಾನೆ"
ಒಪ್ಪಿಸಿ ಕೊಂಡಿಹೆನು ಬರಲಿ ಜೀವನ ಸಂಗೀತ".

(ದೇವವೀಣೆ - ಕವನ)

ಎಂದು ತಮ್ಮನ್ನು ಸಂಪೂರ್ಣವಾಗಿ ಮಾತೃಶಕ್ತಿಗೇ ಸಮರ್ಪಿಸಿಕೊಳ್ಳುತ್ತಾರೆ. ಬೇಂದ್ರೆಯವರಿಗೆ ಪ್ರೇಮದ ಪರಿಪೂರ್ಣ ರೂಪ ತಾಯಿಯೇ, ಹೆಣ್ಣಿನ ಬೇರೆ ಬೇರೆ ರೂಪಗಳು ಇಲ್ಲಿಂದಲೇ ಹೊರಟು, ಮತ್ತೆ ಇಲ್ಲಿಗೇ ಮರಳುತ್ತವೆ.

ಅರವಿಂದರ ಶ್ರೀಮಾತಾರ ಪ್ರಭಾವ ಬೇಂದ್ರೆಯವರಲ್ಲಿನ ಮಾತೃತ್ವ ಪ್ರಜ್ಞೆಯನ್ನು ಇನ್ನಷ್ಟು ಪುಷ್ಟಿಗೊಳಿಸಿತು. ಅರವಿಂದರ ಕಾವ್ಯ ತತ್ತ್ವ ಚಿಂತನೆ, ಶ್ರೀಮಾತಾರ ಮಾತೃಸ್ವರೂಪ ಬೇಂದ್ರೆಯವರ ತಾಯಿ ತತ್ತ್ವಕ್ಕೆ ಆಧಾರವಾಯಿತು. ಅರವಿಂದರ ಪ್ರಭಾವದಿಂದ ಬೇಂದ್ರೆಯವರ ಕಾವ್ಯ, ಪುಷ್ಟಿಯನ್ನು ಕಳೆದುಕೊಳ್ಳದೆ ಮತ್ತಷ್ಟು ಶಕ್ತವಾಯಿತು. ಅರವಿಂದರ ಕೆಲವು ಕವಿತೆಗಳು ಅನುವಾದಗೊಳ್ಳುವಾಗ ಮೂಲಕ್ಕಿಂತ ಹೆಚ್ಚು ಸೃಜನಶೀಲ ಸೃಷ್ಟಿಯಾಗಿವೆ. ಇವರ ಪ್ರಭಾವದಿಂದ ಬೇಂದ್ರೆಯವರು ತಮ್ಮ ಕಾವ್ಯ ಮತ್ತು ಜೀವನ ಎರಡೂ ಔನ್ನತ್ಯಕ್ಕೇರಿತೆಂದು ಭಾವಿಸುತ್ತಾರೆ. ಶಕ್ತಿದೇವತೆಗಳು ಮತ್ತು ಮಾತೃದೇವತೆಗಳು ಮಾತ್ರ ಪ್ರೀತಿಯಿಂದ

ತಮ್ಮನ್ನು ಉದ್ಧರಿಸುವ ಶಕ್ತಿಗಳೆಂದು ಬೇಂದ್ರೆಯವರ ಭಾವನೆ. "ಜೀವನದಲ್ಲಿ ಸೌಂದರ್ಯವು ಪ್ರೇಮವಾಗಿ, ಸೋಮವಾಗಿ, ಸಾಮವಾಗಿ, ಅಂತರ್ಯಾಮಿಯಾಗಿ; ನೇಮವಾಗುತ್ತದೆ. ಶ್ರೇಷ್ಠ ಪ್ರೇಮವಾದ ಮಾತೃ ಪ್ರೇಮವು ಬೇಂದ್ರೆಯವರ ಮಾತೃಗೀತೆಯಲ್ಲಿ ಭಕ್ತಿ ರಸದ ಎತ್ತರಕ್ಕೆ ಏರುತ್ತದೆ". "(ಹೃದಯ ಸಮುದ್ರ-ಮುನ್ನುಡಿ) ಬೇಂದ್ರೆ ಈ ಮಾತೃಶಕ್ತಿಗಳನ್ನು ಶಿಶುಭಾವದಿಂದ ಆರಾಧಿಸುತ್ತ ಮಾತೃ ಪ್ರೇಮವನ್ನು ಬೇಡುತ್ತಾರೆ. "ಮಾತೃಶಕ್ತಿಯು ಮೈಯನ್ನು ಪ್ರವೇಶಿಸಿದಾಗ ಬಿದಿರು ಕೊಳಲಾಗುತ್ತದೆ" ಎಂದು ಭಾವಿಸುವ ಬೇಂದ್ರೆಯವರಿಗೆ, ಆ ಆವೇಶವೇ ಕಾವ್ಯ ಸೃಷ್ಟಿಗೂ ಕಾರಣ ಎನ್ನುವ ನಂಬಿಕೆ ಇದೆ. ಹಣೆ ಬರಹವನ್ನೇ ಬದಲಾಯಿಸುವ ಈ ಮಾತೃ ದೇವತೆಗಳ ಸಂರಕ್ಷಣೆಯ ಬಗ್ಗೆ ಅವರಿಗೆ ಅಪಾರ ನಂಬಿಕೆ. ಬೇಂದ್ರೆಯವರ ಎಲ್ಲ ತಾತ್ವಿಕ ಕವಿತೆಗಳಿಗೂ ವಾತ್ಸಲ್ಯಭಾವ ತಳಹದಿಯಾಗಿದ್ದು, ಒಂದೊಂದು ಕವನವೂ ತನ್ನ ಆಂತರಿಕ ಸಫಲತೆಗಾಗಿ ಒಂದೊಂದು ಉಪಾಸ್ಯ ದೇವತೆಯನ್ನು ಆರಿಸಿಕೊಂಡಿದೆ.

ಬೇಂದ್ರೆಯವರ 'ಕರುಳಿನ ವಚನಗಳು' ಮತ್ತು 'ವಾತ್ಸಲ್ಯ ಗೀತೆಗಳು' ಅವರ ಮಾತೃತ್ವ ಪರಿಕಲ್ಪನೆಯ ಕಿರೀಟಗಳು. ಇವು ಕನ್ನಡ ಸಾಹಿತ್ಯಕ್ಕೇ ವಿಶಿಷ್ಟವಾದವುಗಳು. ಬೇಂದ್ರೆಯವರು ಅನುಭವಿಸಿದ ಕರುಳ ಕುಡಿಗಳ ಸಾವಿನ ನೋವು, ಅದರಿಂದ ಉಂಟಾದ ತಾತ್ವಿಕ ತಿಳಿವು, ಉಳಿದ ಮಕ್ಕಳಿಂದ ಪಡೆದ ಸಂತೋಷ, ಕಂಡು ಕೊಂಡ ಮಾತೃತ್ವದ ಔನ್ನತ್ಯ, ವಾತ್ಸಲ್ಯದ ವೈಭವ, ಮಾತೃ ಪ್ರೀತಿಯ ಜೊತೆ ಜೊತೆಗೇ ಸಮ್ಮಿಳಿತವಾದ ಕಾವ್ಯ ಧರ್ಮ, ಧರ್ಮ, ಪುರಾಣಗಳ ರಸಪಾಕ, ಬಾಲಲೀಲೆಗಳ ರಂಜನೆ – ಇವೆಲ್ಲವುಗಳು ಬೇಂದ್ರೆಯವರ ವಾತ್ಸಲ್ಯ ವೈಭವದ ಮೆರವಣಿಗೆಗಳು. ಈ ನಿಟ್ಟಿನ ಎಲ್ಲ ನೋವು, ಆತಂಕಗಳನ್ನು ಮೀರಿ ಕುಣಿವ ತುಂಬು ವಾತ್ಸಲ್ಯದ ಆಶಾವಾದದ ಬದುಕು ಬೇಂದ್ರೆಯವರ ಆದರ್ಶದ ಬದುಕು. ಮಾತೃತ್ವವನ್ನು ಕುರಿತು ಬೇಂದ್ರೆಯವರಷ್ಟು ಹೃದಯ ಸ್ಪರ್ಶಿಯಾಗಿ, ಶಕ್ತಿಯುತವಾಗಿ ಕವನಗಳನ್ನು ಬೇರೆ ಯಾರೂ ಆಧುನಿಕ ಕನ್ನಡ ಕಾವ್ಯದ ಸಂದರ್ಭದಲ್ಲಿ ರಚಿಸಿಲ್ಲ. "ಬೇಂದ್ರೆ ತಮ್ಮ ಪ್ರಜ್ಞೆಯ ಎಲ್ಲಾ ಮಜಲುಗಳನ್ನು ಅನುಭವಕ್ಕೆ ಒಡ್ಡಿ ಬರೆಯಲು ತೊಡಗಿದ್ದರಿಂದ ಕನ್ನಡ ಸಂವೇದನೆಯಲ್ಲಿ ಬಹು ಮುಖ್ಯವಾದ ಸೂಕ್ಷ್ಮತೆಗಳು ಹುಟ್ಟಿಕೊಂಡವು. ಬದುಕಿನ ಎಲ್ಲ ಅನುಭವವೂ ಗ್ರಾಹ್ಯ ಎನ್ನುವ ನಂಬಿಕೆಯಿಂದ ಎಲ್ಲಾ ಬಗೆಯ ಅನುಭವಗಳನ್ನು ಕಾವ್ಯದ ಹಿಡಿತಕ್ಕೆ ತರುವ ಪ್ರಯತ್ನದಲ್ಲಿ ಅವರು ಭಾಷೆಯ ಸಂವೇದನೆಗಳನ್ನು ಅಗಾಧವಾಗಿ ಹಿಗ್ಗಿಸಿಬಿಟ್ಟರು" [೧] ಎಂದು ರಾಜೇಂದ್ರ ಚೆನ್ನಿ ಅವರು ಅಭಿಪ್ರಾಯ ಪಡುತ್ತಾರೆ. ಬೇಂದ್ರೆಯವರಿಗೆ ತಮ್ಮ ವೈಯಕ್ತಿಕ ಅನುಭವ, ನೋವು, ನಲಿವು, ಆಡು ಮಾತುಗಳು ಎಲ್ಲವನ್ನು ಕಾವ್ಯ ಮಾಡುವ ಮನೋಧರ್ಮ ಮತ್ತು ಜೀವ ಗುಣವಿತ್ತು.

---

೧. ನಡುಹಗಲಿನಲ್ಲಿ ಕಂದೀಲುಗಳು. ಪುಟ-೧೭೦

ಬೇಂದ್ರೆಯವರ ಮಾತೃ ಪ್ರಜ್ಞೆಯ ಪರಿಪೋಷಣೆಗೆ ಜನಪದ ಸಾಹಿತ್ಯದಿಂದ, ದಾಸರುಗಳಿಂದ, ರವೀಂದ್ರನಾಥ ಠಾಗೂರರಿಂದ ದೊರೆತ ಪ್ರೇರಣೆ - ಪ್ರಭಾವಗಳು ಮಹತ್ವವಾದುವುಗಳಾಗಿವೆ. ಈ ಪ್ರಭಾವದಿಂದ ಅವರ ವಾತ್ಸಲ್ಯ ಗೀತೆಗಳು ಇನ್ನಷ್ಟು ವೈವಿಧ್ಯಮಯತೆಯನ್ನು, ಪುಷ್ಟಿಯನ್ನು ಪಡೆದುಕೊಂಡುವು. ಬೇಂದ್ರೆಯವರ ಮಾತೃತ್ವ ಪ್ರಜ್ಞೆಯ ಮುಖ್ಯ ತಾತ್ವಿಕ ನೆಲೆಯ ಕೆಲವು ಪ್ರಾತಿನಿಧಿಕ ಕವನಗಳ ವಿಶ್ಲೇಷಣೆಯಿಂದ ಅವರ ಮಾತೃತ್ವ ಪರಿಕಲ್ಪನೆಯು ಮತ್ತಷ್ಟು ಸ್ಪಷ್ಟಗೊಳ್ಳುತ್ತದೆ.

ಪ್ರಸ್ತುತ ಮಹಾ ಪ್ರಬಂಧದಲ್ಲಿ, ಮಹಾಕವಿ ಮತ್ತು ಮಹತ್ವದ ಕವಿಯಾದ ಬೇಂದ್ರೆಯವರ ಕಾವ್ಯದಲ್ಲಿ 'ಮಾತೃತ್ವದ ಪರಿಕಲ್ಪನೆ'ಯ ಅಧ್ಯಯನಕ್ಕೆ ಹಲವಾರು ಪರಾಮರ್ಶನ ಗ್ರಂಥಗಳ ಅಧ್ಯಯನ ಹಾಗೂ ಉಪಯೋಗವನ್ನು ಪಡೆದಿದ್ದರೂ; ಮೂಲ ಆಕರವಾಗಿ ಬೇಂದ್ರೆಯವರ ಸಮಗ್ರ ಕಾವ್ಯವನ್ನು ಆಳವಾಗಿ ಅಭ್ಯಸಿಸಲಾಗಿದೆ. ಈ ಕೃತಿನಿಷ್ಠ ಅಧ್ಯಯನದಲ್ಲಿ ಬೇಂದ್ರೆಯವರ ಕವನ ಭಾಗಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದ್ದು, ಅದು ಮಹಾಪ್ರಬಂಧದ ವಿಷಯದ ಆಮೂಲಾಗ್ರವಾದ ಅಧ್ಯಯನಕ್ಕೆ ಅಗತ್ಯವಾಗಿದೆ. ಕೆಲವು ಪದ್ಯ ಭಾಗಗಳು, ಕೆಲವು ಮಾತುಗಳು, ವಿಮರ್ಶಕರ ಅಭಿಪ್ರಾಯಗಳು ಕೆಲವೊಮ್ಮೆ ಪುನರಾವರ್ತನೆಗೊಂಡರು ಅದು ನಿರ್ದಿಷ್ಟವಾದ ವಿಷಯದ ಮತ್ತು ಪರಿಕಲ್ಪನೆಯ ಸ್ಪಷ್ಟತೆಗೆ ಪೂರಕವಾಗಿದೆ.

ಹೊಸಗನ್ನಡ ಸಾಹಿತ್ಯದ ಅತ್ಯಂತ ಪ್ರತಿಭಾವಂತ ಕವಿಯಾದ ಬೇಂದ್ರೆಯವರ ಕಾವ್ಯದಲ್ಲಿ ಮಾತೃ ಪ್ರೀತಿಯ ಬಹುಮುಖೀ ಶೋಧವನ್ನು ಕಾಣುತ್ತೇವೆ. ಮಾತೃತ್ವದ ಪರಿಕಲ್ಪನೆ ಅವರ ಒಟ್ಟು ಕಾವ್ಯಕ್ಕಿರುವ ಮೆರುಗಾಗಿದೆ.

"ಈ ಕವಿಯ ಎದುರು ಯಾ ಕವಿಯೇ ಬರಲಿ
ಇಳಿದೀತು ಅವನ ಹಮ್ಮು"

ಎಂದು ಸುಮತೀಂದ್ರ ನಾಡಿಗರು ಹೇಳುವಂತೆ, ಮಾತೃತ್ವ ನಿರೂಪಣೆಯಲ್ಲಂತೂ ಯಾವ ಕವಿಯೂ ಬೇಂದ್ರೆಯವರ ಎದುರು ನಿಲ್ಲುವಂತಿಲ್ಲ. ಅವರ ಪ್ರೇಮಮೀಮಾಂಸೆಯಲ್ಲಿ ಕಾಮ ಪ್ರೇಮವಾಗಿ, ಪ್ರೇಮ ಮೋಹವಾಗಿ, ಮೋಹ ವಾತ್ಸಲ್ಯವಾಗಿ, ವಾತ್ಸಲ್ಯವು ಭಕ್ತಿಯಾಗಿ ವಿಕಸಿತಗೊಳ್ಳುತ್ತದೆ. ವಾತ್ಸಲ್ಯಭಾವವನ್ನು ರಸದ ಮಟ್ಟಕ್ಕೇರಿಸಿದ ಕೀರ್ತಿಯು ಬೇಂದ್ರೆಯವರಿಗೆ ಸಲ್ಲುತ್ತದೆ. ಮಾತೃತ್ವವನ್ನು ಕಳೆದು ಬೇಂದ್ರೆಯವರ ಕಾವ್ಯವನ್ನು ನೋಡಿದರೆ ಅದು ಅತ್ಯಂತ ನೀರಸವಾಗಿ ಕಾಣುತ್ತದೆ. ವಾತ್ಸಲ್ಯ ರಸವೇ ಬೇಂದ್ರೆಯವರ ಕಾವ್ಯ ರಸಸಿದ್ಧಿ ಎಂಬುದೇ ಅವರ ಕಾವ್ಯದ ದರ್ಶನ.